POLICE NEWS REGISTERED KA/BGW-1618/2024-26 REGD. WITH RNI NO. 36669/82 PAGES : 16 | POSTED AT BANGALORE PSO BG 560026 Every Tuesday | Publishing Date : 28.9.2025

# 75ರ ಹೊಸ್ತಿಲಲ್ಲಿ ಅಶೋಕ ಚಕ್ರವರ್ತಿ ವಿರಾಜಮಾನರು!



ಸಿನಿ ಮಂದಿ ಹುಟ್ಟುಹಬ್ಬ ಎಂದಾಕ್ಷಣ ನಮ್ಮ ಜನರಿಗೆ ನೆನಪಾಗುವುದು ಬರೀ ರಾಜ್‌ಕುಮಾರ್, ವಿಷ್ಣುವರ್ಧನ್, ಅಂಬರೀಷ್, ಉಪೇಂದ್ರ. ಸುದೀಪ್, ದರ್ಶನ್, ಪುನೀತ್... ಇಷ್ಟೇ ಹೆಸರು. ಸಿಲ್ಕ್ ಸ್ಮಿತಾ, ಡಿಸ್ಕೋ ಶಾಂತಿ, ಅನುರಾಧ ನೆನಪಾಗುವುದೇ ಇಲ್ಲಾ! ಅವರ ಮಾತಿರಲಿ, ನಮ್ಮ ಕ್ರಾಂತಿಯೋಗಿ ಬಸವಣ್ಣ ಅಶೋಕ್ ಕೂಡ ನೆನಪಾಗದೆ ಇರೋದು ನಿಜಕ್ಕೂ ವಿಪರ್ಯಾಸ.

ಅಶೋಕ್ ಒಂದು ಕಾಲದಲ್ಲಿ ಸ್ಪುರದ್ರೂಪಿ ನಟರಾಗಿ ಹತ್ತಾರು ಹಿಟ್ಸ್ ಕೊಟ್ಟಿದ್ದಾರೆ ಗೊತ್ತಾ....ಸೂಪರ್ ಸ್ಟಾರ್ ರಜನಿಕಾಂತ್ ಕ್ಲಾಸ್‌ಮೇಟ್ ಕಣ್ರೀ ಅಶೋಕಣ್ಣ! ನಟನೆ ಮಾತ್ರವಲ್ಲದೆ ಕನ್ನಡ ಚಲನಚಿದ್ಯೋದ್ಯಮದಲ್ಲಿ ಕಾರ್ಮಿಕ ಸಂಘಟನೆಯ ಅಧ್ಯಕ್ಷರಾಗಿ ದುಡಿದಿದ್ದಾರೆ ಕೂಡ. ಅಂದಹಾಗೆ, ಅಶೋಕ್ ಆನೇಕಲ್ ಪಟ್ಟಣದವರು. 1951ರ ಸೆಪ್ಟೆಂಬರ್ 22ರಂದು ಆನೇಕಲ್‌ನಲ್ಲಿ ಜನಿಸಿದರು. ತಂದೆ ಲಕ್ಷ್ಮೀನರಸಿಂಹಯ್ಯ ವೃತ್ತಿಯಲ್ಲಿ ಪೋಲೀಸ್ ಇನ್‌ಸ್ಪೆಕ್ಟರ್ ಆಗಿದ್ದವರು. ತಾಯಿ ಪುಟ್ಟಮ್ಮ ಗೃಹಿಣಿ.

ಅಶೋಕರಿಗೆ ಚಿಕ್ಕಂದಿನಿಂದಲೂ ಚಿತ್ರ ನಟನಾಗುವ ಹಂಬಲವಿತ್ತು. ಬೆಂಗಳೂರಲ್ಲಿ ತಮ್ಮ ಪದವಿ ಶಿಕ್ಷಣವನ್ನು ಪೂರೈಸಿದ ಕೂಡಲೇ ಮದ್ರಾಸ್ ಫಿಲಂ ಇನ್‌ಸ್ಟಿಟ್ಯೂಟ್ ಸೇರಿ ನಟನೆಯಲ್ಲಿ ತರಬೇತಿ ಪಡೆದರು. 1975ರಲ್ಲಿ ತೆರೆ ಕಂಡ ಶ್ರೀನಾಥ್ ನಾಯಕರಾಗಿದ್ದ 'ಹೆಣ್ಣು ಸಂಸಾರದ ಕಣ್ಣು' ಚಿತ್ರದಲ್ಲಿ ನಟಿಸುವುದರ ಮೂಲಕ ಅಶೋಕ್ ಕನ್ನಡ ಚಿತ್ರರಂಗವನ್ನು ಪ್ರವೇಶಿಸಿದರು. ನಂತರ 'ಸನಾದಿ ಅಪ್ಪಣ್ಣ' ಚಿತ್ರದಲ್ಲಿ ಡಾ.ರಾಜಕುಮಾರ್ ಮಗನ ಪಾತ್ರವನ್ನು ನಿರ್ವಹಿಸಿದರು. ದ್ವಾರಕೀಶ್ ನಿರ್ಮಿಸಿದ 'ಭಾಗ್ಯವಂತರು' ಚಿತ್ರದಲ್ಲಿ ಮತ್ತೊಮ್ಮೆ ರಾಜ್‌ಕುಮಾರ್ ಪುತ್ರರಾಗಿ ಅದ್ಭುತವಾಗಿ ಅಭಿನಯಿಸಿದರು.

ದೀಪ, ಗೆದ್ದವಳು ನಾನೇ, ಬಯಲು ದಾರಿ, ರಂಗನಾಯಕಿ, ತಾಯಿಯ ಮಡಿಲಲ್ಲಿ, ಗಣೇಶನ ಮಹಿಮೆ, ಕ್ರಾಂತಿಯೋಗಿ ಬಸವಣ್ಣ, ಮುಗಿಲ ಮಲ್ಲಿಗೆ, ತುಂಬಿದ ಮನೆ, ಅರ್ಚನಾ, ರಂಗನಾಯಕಿ, ಚೆಲ್ಲಿದ ರಕ್ತ, ಪಾವನ ಗಂಗಾ, ಎಪ್ಪಿಸಾಂಗ್ಲಿಯಾನ...ಮುಂತಾದ ಚಿತ್ರಗಳಲ್ಲಿ ಹೀರೋ, ಸೋಲೋ ಹೀರೋ ಆಗಿ ನಟಿಸಿದರು. ಪೋಷಕ ನಟರಾಗಿ ಶಿವಣ್ಣ ಜೊತೆ ಜನುಮದ ಜೋಡಿ, ಸುದೀಪ್ ಜೊತೆ ಮಹಾರಾಜಾ, ಕೆಂಪೇಗೌಡ, ಮಾಣಿಕ್ಯ, ಪುನೀತ್‌ರಾಜ್‌ಕುಮಾರ್ ಜೊತೆ ಅಪ್ಪು, ನಮ್ಮ ಬಸವ, ರಾಜಕುಮಾರ, ಉಪ್ಪಿ ಜೊತೆ ಕುಟುಂಬ, ನ್ಯೂಸ್, ದರ್ಶನ್ ಜೊತೆ ಸ್ವಾಮಿ, ಚಕ್ರವರ್ತಿ, ಮುರುಳಿ ಜೊತೆ ಚಂದ್ರ ಚಕೋರಿ.... ಮುಂತಾದ ಚಿತ್ರಗಳಲ್ಲಿ ನಟಿಸಿದ್ದಾರೆ.

ಅಶೋಕ್ ಕರ್ನಾಟಕ ಚಲನಚಿತ್ರ ಕಲಾವಿದರು ಮತ್ತು ಕಾರ್ಮಿಕರ ನಾಯಕರಾಗಿ ಕರ್ತವ್ಯ ನಿರ್ವಹಿಸಿರುವಂತೆಯೇ ಡಾ. ರಾಜ್ ಜೊತೆ ಗೋಕಾಕ್ ಚಳುವಳಿ ಮತ್ತು ರೈತಪರ ಚಳುವಳಿಗಳಲ್ಲಿ ಭಾಗವಹಿಸಿದ್ದಾರೆ. ಅವರು ಈಗಲೂ ಕಲಾಸೇವೆ ಹಾಗೂ ಕಲಾವಿದರ ಸೇವೆ ಮಾಡುತ್ತಿದ್ದಾರೆ. ಇಂತಹ ಅಪರೂಪದ ಹಿರಿಯ ನಟ ಅಶೋಕ್ ಅವರಿಗೆ ಇದೀಗ 75ರ ಸಂಭ್ರಮ.... ಹ್ಯಾಪಿ ಬರ್ತ್‌ಡೇ ಸರ್... ಅಶೋಕ್ ಅವರು ಇನ್ನಷ್ಟು ವರ್ಷ ಆರೋಗ್ಯವಂತರಾಗಿ ಆಯುಷ್ಯವಂತರಾಗಿ ಬದುಕಿ ಕಲಾಸೇವೆ ಮಾಡಲಿ ಎಂಬುದೇ ನಮ್ಮಾಸೆ... ☯




# ವಾವ್ ಓಜಿ...!





ಹೀರೋ ಭರ್ಜರಿ ಎಂಟ್ರಿ, ಸ್ಲೋಮೋಷನ್ ವಾಕ್, ಕೈಯಲ್ಲಿ ಬಂದೂಕು ಅಥವಾ ಕತ್ತಿ, ಭರ್ಜರಿ ಫೈಟಿಂಗ್, ಹಿನ್ನಲೆಯಲ್ಲಿ ಕಿವಿಗಡಚಿಕ್ಕುವ ಮ್ಯೂಸಿಕ್.... ಸುಂದರವಾದ ಹೀರೋಯಿನ್, ಕಿಕ್ ಏರಿಸೋ ಐಟಂ ಸಾಂಗ್ ಅತ್ಯಂತ ಕ್ರೂರ ಪ್ರವೃತ್ತಿಯ ವಿಲನ್‌ಗಳ ಅಬ್ಬರ... ಇಷ್ಟಿದ್ದರೆ ಸಾಕು! ಸ್ಟಾರ್ ಹೀರೋ ಸಿನಿಮಾ ಸಿದ್ಧವಾದಂತೆ!!

ನೆನಪಿರಲಿ, ಇಷ್ಟಿದ್ದ ಮಾತ್ರಕ್ಕೆ ಸ್ಟಾರ್ ನಟರ ಸಿನಿಮಾ ಗೆದ್ದು ಬಿಡುತ್ತದೆ ಎಂದೇನೂ ಇಲ್ಲ, ಈ ಸಿದ್ಧ ಸೂತ್ರವನ್ನು ಆಧುನಿಕ ತಂತ್ರಜ್ಞಾನಗಳನ್ನೆಲ್ಲ ಬಳಸಿಕೊಂಡು ಅದ್ದೂರಿಯಾಗಿ ನಾಜೂಕಾಗಿ ಅಭಿಮಾನಿಗಳಿಗೆ ಪ್ರಿಯವಾಗುವಂತೆ, ಎಲ್ಲೂ ಬೋರು ಹೊಡೆಯದಂತೆ ಕಟ್ಟಿಕೊಡಬೇಕು! ಅವಾಗ ಆ ಸಿನಿಮಾ ಸೂಪರ್ ಹಿಟ್ಟೋ ಬ್ಲಾಕ್ ಬಸ್ಟರ್ರೋ ಆಗುತ್ತದೆ.

ಆಂಧ್ರ ಡಿಸಿಎಂ ಪವನ್ ಕಲ್ಯಾಣ್ ಅವರ ನಟನೆಯ ಓಜಿ ಸಿನಿಮಾದಲ್ಲಿ ಈ ಮ್ಯಾಜಿಕ್ ಚೆನ್ನಾಗಿ ಕೆಲಸ ಮಾಡಿದೆ. 'ಸಾಹೋ' ಫೇಮ್ ನಿರ್ದೇಶಕ ಸುಜಿತ್ ಆ ಕಾರ್ಯವನ್ನು ಅಚ್ಚುಕಟ್ಟಾಗಿ ಮಾಡಿದ್ದಾರೆ.

ಚಿತ್ರಮಂದಿರದಲ್ಲಿ ಅಭಿಮಾನಿಗಳು ಶಿಳ್ಳೆ, ಚಪ್ಪಾಳೆ ಹೊಡೆಯುವಂತೆ ಪ್ರತಿ ಹತ್ತು-ಹದಿನೈದು ನಿಮಿಷಗಳಿಗೊಮ್ಮೆ ಎಲಿವೇಶನ್ ಸೀನುಗಳನ್ನು, ಆಕ್ಷನ್ ದೃಶ್ಯಗಳನ್ನು ಪೋಣಿಸಿದ್ದಾರೆ. ಸಿನಿಮಾದಲ್ಲಿ ಪವನ್ ಸೊಂಯ್ಯನೆ ಮೇಲೆ ಹಾರುವುದಿಲ್ಲ ಎಂಬುದನ್ನು ಬಿಟ್ಟರೆ ಬಹುತೇಕ ಸೂಪರ್ ಹೀರೋ ರೀತಿಯೇ ಅವರನ್ನು ವಿಜೃಂಭಿಸಲಾಗಿದೆ! ಎದುರಾಳಿಗಳು ಹಾರಿಸುವ ಗುಂಡುಗಳನ್ನು ಕೇವಲ ಕತ್ತಿ ಜಳಪಿಸಿಯೇ ತಡೆದು ಬಿಡುತ್ತಾರೆ!





ಓಜಿ ಸಿನಿಮಾದಲ್ಲಿ ಕತೆಗೆ ನಾಲ್ಕನೇ ಆದ್ಯತೆ ನೀಡಲಾಗಿದೆ. ಮೊದಲ ಆದ್ಯತೆ ಪವನ್ ಕಲ್ಯಾಣ್ ಲುಕ್, ಸ್ಲೋ ಮೋಷನ್ ವಾಕುಗಳಿಗೆ. ಎರಡನೇ ಆದ್ಯತೆ ಆಕ್ಷನ್ ಸೀನುಗಳಿಗೆ. ಮೂರನೇ ಆದ್ಯತೆ ಹಿನ್ನೆಲೆ ಸಂಗೀತಕ್ಕೆ! ಓಜಿ ಸಿನಿಮಾ ಕತೆಯನ್ನು ಸರಳವಾಗಿ ವಿವರಿಸುವುದಾದರೆ, ಇದೊಂದು



ಗ್ಯಾಂಗ್‌ಸ್ಟರ್ ಒಬ್ಬನ ಸ್ಟೋರಿ.

ಸಭ್ಯ ಉದ್ಯಮಿಯೊಬ್ಬನ ಬಲಗೈ ಭಂಟನ ಕತೆ. ಮುಂಬೈನಲ್ಲಿ ಈತನದ್ದೇ ಹವಾ. ಈತನ ಕಠಾನಗೆ ಸಾವಿರಾರು ದುರುಳರು ಬಲಿ ಆಗಿದ್ದಾರೆ. ಆದರೆ ತಾನು ಮಾಡದ ತಪ್ಪನ್ನು ತಲೆ ಮೇಲೆ ಹೊತ್ತುಕೊಂಡು ಆ ಸಭ್ಯ ಉದ್ಯಮಿ ಮುಂಬೈ ಬಿಟ್ಟು ಹೋಗುತ್ತಾನೆ. ಆದರೂ ಆ ಉದ್ಯಮಿಗೆ ಮತ್ತೆ ದುರುಳರಿಂದ ಸಂಕಷ್ಟ ಎದುರಾದಾಗ...ಓಜಿ ಮತ್ತೆ ಮುಂಬೈಗೆ ಬರುತ್ತಾನೆ. ದುಷ್ಟರ ಸಂಹಾರ ಮಾಡುತ್ತಾನೆ.

ಅಂದಹಾಗೆ ಈ ಗ್ಯಾಂಗ್‌ಸ್ಟರ್‌ಗೆ ಜಪಾನಿನ ಲಿಂಕು ಇದೆ! ಆ ಲಿಂಕು ಏನೆಂದು ನಾವು ಹೇಳಬಾರದು. ನೀವೇ ಸಿನಿಮಾ ನೋಡಿ ತಿಳಿಯಬೇಕು... ಓ ಜಿಯಲ್ಲಿ ಪವನ್ ಕಲ್ಯಾಣ್ ಅವರದ್ದು ಗಂಭೀರ ಪಾತ್ರವಾದರೂ ಹೆಚ್ಚಿನ ಶ್ರಮ ತೆಗೆದುಕೊಳ್ಳದೆ ಆರಾಮವಾಗಿ ನಿರ್ವಹಿಸಿದ್ದಾರೆ. ಆದರೆ ಕೆಲವು ವರ್ಷಗಳ ಹಿಂದಿದ್ದ ಎನರ್ಜೆಟಿಕ್ ಪವನ್ ಕಲ್ಯಾಣ್ ಈ ಸಿನಿಮಾನಲ್ಲಿ ಮಿಸ್ಸಿಂಗ್! ಹಾಗಂತ ಬೇಜಾರು ಆಗಬೇಡಿ. ಗ್ಯಾಂಗ್‌ಸ್ಟರ್ ಪಾತ್ರಕ್ಕೆ ತಕ್ಕಂತೆ ಒಳ್ಳೆಯ ಸ್ವಾಗ್ ತೋರಿಸಿದ್ದಾರೆ. ಆಕ್ಷನ್ ಸೀನ್‌ಗಳಲ್ಲಿ ಸಖತ್ ಮಿಂಚಿದ್ದಾರೆ. ಪವನ್ ಬಿಟ್ಟರೆ ಸಿನಿಮಾನಲ್ಲಿ ಹೆಚ್ಚು ಗಮನ ಸೆಳೆಯುವುದು ಕಿಸ್ಸರ್ ಬಾಯ್ ಇಮ್ರಾನ್ ಹಶ್ಮಿ! ಇವರೇ ಮೇನ್ ವಿಲ್ಲನ್.

ಪವನ್ ಅವರಂತೆಯೇ ಕೆಲವು ಎಲಿವೇಶನ್ ಸೀನ್‌ಗಳಲ್ಲಿ ಆಕ್ಷನ್ ದೃಶ್ಯಗಳಲ್ಲಿ ಇಮ್ರಾನ್ ಸಖತ್ ಮಿಚಿದ್ದಾರೆ. ಪ್ರಕಾಶ್ ರೈ ತಮ್ಮ ಪಾತ್ರವನ್ನು ಶ್ರದ್ಧೆಯಿಂದ ನಿರ್ವಹಿಸಿದ್ದಾರೆ. ರಾಜಕೀಯ ಭಿನ್ನಾಭಿಪ್ರಾಯಗಳ ನಡುವೆಯೂ ಪವನ್‌ಕಲ್ಯಾಣ್ ಹಾಗೂ ಪ್ರಕಾಶ್ ರೈ ಒಟ್ಟಿಗೆ ನಟಿಸಿರುವುದು ಗಮನಾರ್ಹ. ಶ್ರೇಯಾ ರೆಡ್ಡಿ ನಟನೆ ಚೆನ್ನಾಗಿದೆ. ನಾಯಕಿ ಪ್ರಿಯಾಂಕಾ ಮೋಹನ್ ಮುದ್ದು ಮುದ್ದಾಗಿ ಕಂಗೊಳಿಸುತ್ತಾರೆ. ನಮ್ಮ ಭಜರಂಗಿ ಲೋಕಿ ಅವರು ಎರಡನೇ ವಿಲ್ಲನ್ ಆಗಿ ಮಿಂಚಿಕೊಂಡಿದ್ದಾರೆ. ಎಸ್. ಥಮನ್ ಅವರ ಅಬ್ಬರದ ಹಿನ್ನೆಲೆ ಸಂಗೀತ, ಪವನ್ ಅವರ ಪಾತ್ರವನ್ನು ಸಖತ್ ಆಗಿ ಎಲಿವೇಟ್ ಮಾಡಿದೆ. ಚಿತ್ರಮಂದಿರದಲ್ಲಿ ಬೀಳುವ ಶಿಳ್ಳೆ, ಚಪ್ಪಾಳೆಯಲ್ಲಿ ಅವರಿಗೂ ಪಾಲು ಸೇರಬೇಕು! ಇಲ್ಲಿ ಹಾಡಿಗಿಂತ ಆಕ್ಷನ್ ದೃಶ್ಯಗಳು ಅದ್ಭುತವಾಗಿವೆ. ಇಂಟರ್ವೆಲ್ ಫೈಟ್ ಅಂತೂ ಮೈನವಿರೇಳಿಸುವಂತಿದೆ. ಒಟ್ಟಾರೆ, ಇದು ಪವನ್ ಕಲ್ಯಾಣ್ ಅಭಿಮಾನಿಗಳಿಗಾಗಿಯೇ ಮಾಡಿರುವ ಸಿನಿಮಾ ನೋಡಿ ಖುಷಿಪಡಿ... ☯

Vol. 41 No. 17 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666
Email: policenewsreporter@gmail.com